## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ 510/2023

**ಸಾಕ್ಷಿಯನ್ನು ದಿಃ 16.05.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಯಶೋಧಮ್ಮ | ಸಿಡಬ್ಲ್ಯೂ 7 | ಪಿಡಬ್ಲ್ಯೂ6 |
| ತಂದೆಯ ಹೆಸರು | ಸಣ್ಣ ನಾಯಕ | | |
| ವಯಸ್ಸು | 48 ವರ್ಷ | | |
| ಉದ್ಯೋಗ | ಗ್ರಂಥಪಾಲಕಿ | | |
| ವಾಸಸ್ಥಳ | ಬನ್ನಿಕುಪ್ಪೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಚಾಸಾ 1 ರಿಂದ 6 ಹಾಗೂ 8 ಗೊತ್ತು . ದಿ 27.06.2022 ರಂದು ನಾವೆಲ್ಲರೂ ಮಂಡ್ಯಕ್ಕೆ ಟಿಟಿ ವಾಹನದಲ್ಲಿ ಮೀಟಿಂಗ್‌ಗೆ ಹೋಗಿದ್ದೇವು. ಮೀಟಿಂಗ್ ಮುಗಿಸಿ ಸಂಜೆ 06.00 ಗಂಟೆಗೆ ಅದೇ ವಾಹನದಲ್ಲಿ ಮಂಡ್ಯದಿಂದ ವಾಪಸ್ ಊರಿಗೆ ಹೊರಟೇವು ರಾತ್ರಿ ಸುಮಾರು 08.00 ಗಂಟೆ ಸಮಯದಲ್ಲಿ ಮಲ್ಲಿನಾಥಪುರ ಗೇಟ್ ಬಳಿ ಬರುತ್ತಿದ್ದಾಗ ನಾವು ಪ್ರಯಾಣಿಸುತ್ತಿದ್ದ ಟಿ ಟಿ ವಾಹನದ ಚಾಲಕ ಅತಿವೇಗವಾಗಿ ಚಲಾಯಿಸಿಕೊಂಡು ಹೋಗಿ ಹುಣಸೂರು ಕಡೆಯಿಂದ ಬರುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ ಗೆ ಡಿಕ್ಕಿ ಆಯಿತು. ನನ್ನ ಸಹದ್ಯೋಗಿ ನಾಗಯ್ಯ ಸ್ಥಳದಲ್ಲಿಯೇ ಮೃತಪಟ್ಟರು. ಜ್ಯೋತಿರವರಿಗೆ ತಲೆಗೆ ತೀವ್ರವಾಗಿ ಪೆಟ್ಟಾಯಿತು ಅವರು ದಿನಾಂಕ 30.06.2022 ರಂದು ಬೃಂದಾವನ ಆಸ್ಪತ್ರೆಯಲ್ಲಿ ಮೃತಪಟ್ಟರು. ನನ್ನ ಬಲಗೈಗೆ ಮುರಿತದ ಏಟು ಆಯಿತು ನನ್ನ ಎಡಗಾಲಿಗು ಕೂಡ ಏಟಾಗಿ 8 ಹೋಲಿಗೆ ಹಾಕಿದ್ದಾರೆ. ಚಾಸಾ 5 ರವರಿಗೆ ಸೊಂಟಕ್ಕೆ ಏಟಾಯಿತು ಅವರನ್ನು, ನನ್ನನ್ನು, ಜ್ಯೋತಿ, ಚಾಸಾ 6 ,

ಚಾಸಾ 4 ರವರನ್ನು ಕೆ ಆರ್ ಆಸ್ಪತ್ರೆಗೆ ದಾಖಲಿಸಲಾಯಿತು. ಉಳಿದ ಗಾಯಾಳುಗಳನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಅಪಘಾತವು ಟಿಟಿ ವಾಹನದ ಚಾಲಕನ ತಪ್ಪಿನಿಂದ ಆಗಿದೆ. ನಾನು ಟಿಟಿ ವಾಹನದ ಚಾಲಕನನ್ನು ಆ ದಿನ ನೋಡಿಲ್ಲ ನಾನು ಹಿಂದೆ ಕುಳಿತಿದ್ದೆ. (ಆರೋಪಿ ಗೈರು ಹಾಜರಿದ್ದು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ವಕೀಲರು ಹೇಳಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ). ಸಾಕ್ಷಿ ನಿ ಪಿ 3 ರಿಂದ ನಿ ಪಿ 7 ರ ಭಾವಚಿತ್ರವನ್ನು ನೋಡಿ ಅದೇ ವಾಹನದಲ್ಲಿ ಆ ದಿನ ನಾವು ಪ್ರಯಾಣಿಸುತ್ತಿದ್ದೇವು ಎಂದು ನುಡಿಯುತ್ತಾರೆ. ಟಿ ಟಿ ವಾಹನದ ಸಂಖ್ಯೆ ಗೊತ್ತಿಲ್ಲ. ನನ್ನನ್ನು ಪೋಲೀಸರು ವಿಚಾರಣೆ ಮಾಡಿದ್ದಾರೆ ನಾನು ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀಸವಾಲು ಸಸಅ ರವರಿಂದಃ-</u>**

ಟಿಟಿ ವಾಹನದ ಸಂಖ್ಯೆ ಕೆ ಎ 12 ಎ 6816 ಎಂದರೆ ಇರಬಹುದು. ಆ ದಿನ ಟಿಟಿ ವಾಹನವನ್ನು ಪ್ರದೀಪ ಎಂಬಾತ ಚಲಾಯಿಸುತ್ತಿದ್ದ ಎಂದರೆ ಸರಿ . ಆರೋಪಿ ವಾಹನವನ್ನು ಅಜಾಗರೂಕತೆಯಿಂದ ಮತ್ತು ಅಡ್ಡಾದಿಡ್ಡಿಯಾಗಿ ಚಲಾಯಿಸುತ್ತಿದ್ದ ಎಂದರೆ ಸರಿ ಅದರಿಂದಾಗಿಯೇ ಅಪಘಾತವಾಗಿದೆ ಎಂದರೆ ಸರಿ .

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಆರ್ ವಕೀಲರಿಂದ ಃ-</u>**

**<u>ಅವರ ಪರ ಕುಮಾರಿ ಎಂ . ಆರ್ . ವಕೀಲರು ಕಾಲವಕಾಶ ಕೋರಿದ್ದು ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇದೆ.,**

Sd/-
(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.